ಇಲಾಖೆ / ವಿಷಯ: DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ    ದಿನಾಂಕ : DATE : 2/12/19

# ಪ್ರತಿಪಕ್ಷಗಳ ಶಾಸಕರದ್ದೂ ಹನಿಟ್ರ್ಯಾಪ್ ವಿಡಿಯೋ!

## ರಾಘವೇಂದ್ರನ ಬಳಿ ಹಲವು ಶಾಸಕರ ವಿಡಿಯೋ ಪತ್ತೆ ದೂರು ನೀಡದೇ ಇದ್ದರೂ ತನಿಖೆ ಎದುರಿಸುವ ಸಂಕಷ್ಟ

ಬೆಂಗಳೂರು: 'ಬಿಜೆಪಿ ಹನಿಟ್ರ್ಯಾಪ್' ಬಲೆಯಲ್ಲಿ ಪಕ್ಷಾತೀತವಾಗಿ ಶಾಸಕರು ಸಿಲುಕಿರುವುದು ತನಿಖೆಯಿಂದ ಬಹಿರಂಗಗೊಂಡಿದೆ.

ಸದ್ಯ ಸಾಮಾಜಿಕ ಜಾಲತಾಣಗಳಲ್ಲಿ ಉತ್ತರ ಕರ್ನಾಟಕದ ಭಾಗದ ಆಡಳಿತಾರೂಢ ಪಕ್ಷದ ಶಾಸಕರೊಬ್ಬರ ವಿಡಿಯೋ ವೈರಲ್ ಆಗಿದೆ. ಆದರೆ ಸಂತ್ರಸ್ತರ ಪಟ್ಟಿಯಲ್ಲಿ ವಿಪಕ್ಷಗಳ ಶಾಸಕರೂ ಸಹ ಇದ್ದು, ಹನಿಟ್ರ್ಯಾಪ್ ಪ್ರಕರಣದ ಪ್ರಮುಖ ಆರೋಪಿ ರಾಘವೇಂದ್ರನಿಂದ ಜಪ್ತಿಯಾದ ಪೆನ್‌ಡ್ರೈವ್‌ನಲ್ಲಿ ಪಕ್ಷಾತೀತವಾಗಿ ಶಾಸಕರ ಖಾಸಗಿ ವಿಡಿಯೋಗಳು ಸಿಕ್ಕಿವೆ ಎನ್ನಲಾಗಿದೆ. ಹಲವು ದಿನಗಳಿಂದ ರಾಘವೇಂದ್ರ, ಸಂತ್ರಸ್ತ ಶಾಸಕರ ರಾಜಕೀಯ ವಿರೋಧಿಗಳನ್ನು ಸಂಪರ್ಕಿಸಿ ಡೀಲ್ ಕುದುರಿಸಿದ್ದ. ಆದರೆ ವಿಡಿಯೋಗಳಿಗೆ ದುಬಾರಿ ಬೆಲೆ ನಿಗದಿ ಮಾಡಿದ ಕಾರಣಕ್ಕೆ ಶಾಸಕರ ವಿರೋಧಿಗಳು ಆ ವಿಡಿಯೋಗಳ ಖರೀದಿಗೆ ಹಿಂದೇಟು ಹಾಕಿದ್ದರು. ಆದರೆ ಈಗ ಆ ವಿಡಿಯೋಗಳು ಸಿಸಿಬಿ ಪೊಲೀಸರಿಗೆ ಸಿಕ್ಕಿವೆ. ಈ ಜಾಲದ ಬೇರು ಶೋಧನೆ ಮುಂದುವರೆಸಿದ ಪೊಲೀಸರು, ವಿಚಾರಣೆಗೆ ಕರೆಸುವ ಸಾಧ್ಯತೆಗಳಿವೆ ಎಂದು ಮೂಲಗಳು ಹೇಳಿವೆ. ಹೀಗಾಗಿ ಮರ್ಯಾದೆಗೆ ಅಂಜಿ ತಾವು ಬ್ಲ್ಯಾಕ್‌ಮೇಲ್ ಬಗ್ಗೆ ದೂರು ಕೊಡದೆ ಹೋದರೂ ಸಿಸಿಬಿ ತನಿಖೆಗೊಳಗಾಬೇಕಾದ ಸಂದಿಗ್ಧ ಪರಿಸ್ಥಿತಿಗೆ ಸಂತ್ರಸ್ತ ಶಾಸಕರು ಸಿಲುಕಿದ್ದಾರೆ ಎಂದು ತಿಳಿದುಬಂದಿದೆ. ಇನ್ನು ರಾಘವೇಂದ್ರನಿಂದ ವಶಪಡಿಸಿಕೊಳ್ಳಲಾಗಿರುವ ಹಾರ್ಡ್ ಡಿಸ್ಕ್, ಪೆನ್ ಡ್ರೈವ್‌ಗಳನ್ನು ತಪಾಸಣೆಸಲುವಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಸಿಸಿಬಿ ಪೊಲೀಸರು ರವಾನಿಸಿದ್ದಾರೆ.